ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಮಂತ್ರಿಗಳೇ, ಅಕ್ರಮವಾಗಿ 2 ಸೆಂಟ್ಸ್, 3 ಸೆಂಟ್ಸ್ ಜಾಗದಲ್ಲಿ ಮನೆ ಮಾಡಿ ಕುಳಿತಿದ್ದಾರೆ. 20 ವರಷಕ್ಕಿಂತ ಮೊದಲೇ ಅವರು ಕುಳಿತಿದ್ದಾರೆ. ಅವರಿಗೆ ರೇಷನ್ ಕಾರ್ಡ್ ಇದೆ, ಹೌಸ್ ನಂಬರ್ ಸಿಕ್ಕಿದೆ ಮತ್ತು ಅದಕ್ಕೆ ಸಂಬಂಧಪಟ್ಟ ಹಾಗೆ ಎಲ್ಲಾ ಸಿಕ್ಕಿದೆ. ಅದು ಅಕ್ರಮ ಆಗಿರುವುದನ್ನು ಸಕ್ರಮ ಮಾಡಿಕೊಡಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ನಾರಾಯಣ್ ಅವರು ಕೇಳಿದಂತಹ ಪ್ರಶ್ನೆಗೆ ಉತ್ತರವಾಗಿ ಸರ್ಕಾರ ಈಗಾಗಲೇ ತೀರ್ಮಾನ ತೆಗೆದುಕೊಂಡಿದೆ. ಮತ್ತು ಆಡಿಷನಲ್ ಏನೆಂದರೆ ಕಮಿಟಿ ಕಾನಸ್ಟ್ಯೂಟ್ ಮಾಡತಕ್ಕಂತಹ ರೀತಿಯಲ್ಲಿ 15 ದಿವಸದೊಳಗೆ ತೀರ್ಮಾನ ತೆಗೆದುಕೊಂಡು ಕನ್ಫೂಡ್ ಮಾಡುತ್ತೇವೆ. ಅದರ ಬಗ್ಗೆ ನಾವು ಬಹಳ ಗಮನ ಕೊಟ್ಟಿದ್ದೇವೆ. ಏಕೆಂದರೆ ಈಗಾಗಲೇ ಎಲ್ಲಾ ವಿವರವನ್ನು ನಾವು ತರಿಸಿಕೊಂಡಾಗ ನಮ್ಮ ಟಾರ್ಗೆಟ್ ಎಷ್ಟು ಇತ್ತು ಅದರ ಪ್ರಕಾರ ಕೆಲಸವಾಗಿಲ್ಲ. ಮತ್ತು ವಿಜಯಕುಮಾರ್ ಶೆಟ್ಟಿಯವರ ಪ್ರಶ್ನೆ ಉದ್ಭವವಾಗುವುದಿಲ್ಲ. ಆದರೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಶಾಸಕರ ಜೊತೆ ಸಮಾಲೋಚನೆ ಮಾಡಿದ್ದೇವೆ ಇದರ ಜೊತೆ ಸರ್ಕಾರ ಉಪ ಸಮಿತಿ ಕೂಡ ಮಾಡಿದೆ, ಈ ಉಪ ಸಮಿತಿ ಒಂದು ತಿಂಗಳ ಒಳಗಾಗಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ.

ಕೆ.ಯು.ಡಬ್ಲ್ಯು.ಎಸ್. ಇಲಾಖೆಯಿಂದ ತೆಗೆದುಕೊಂಡ ಕುಡಿಯುವ ನೀರು ಯೋಜನೆಗಳು.

716 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ಕೆ.ಯು.ಡಬ್ಲ್ಯೂ.ಎಸ್. ಇಲಾಖೆಯಿಂದ ಎಷ್ಟು ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ ಹಾಗೂ ಅವು ಯಾವುವು?

ಆ) ವಿವಿಧ ಯೋಜನೆಗಳಲ್ಲಿ ಖರ್ಚು ಮಾಡಿದ ಹಣವೆಷ್ಟು? ಅವು ಯಾವ ಹಂತದಲ್ಲಿದೆ?

ಇ) ಶಿಗ್ಗಾಂ, ಸವಣೂರ, ಬಂಕಾಪುರ ಸಂಯುಕ್ತ ಕುಡಿಯುವ ನೀರಿನ ಯೋಜನೆಯ ಟ್ರೀಟ್ಮೆಂಟ್ ಪ್ಲಾಂಟ್ಗೆ ಟೆಂಡರ್ ಕರೆಯಲಾಗಿದೆಯೇ?

ಈ) ಸದರಿ ಯೋಜನೆಯ ಕೆಲಸ ಯಾವ ಹಂತದಲ್ಲಿದೆ?

ಶ್ರೀ ಚೌಡಾ ರೆಡ್ಡಿ (ನಗರಾಭಿವೃದ್ಧಿ ಸಚಿವರು.) :

ಅ) 1993-94ನೇ ಸಾಲಿನಲ್ಲಿ ಹೊಸ ನೀರು ಸರಬರಾಜು ಯೋಜನೆಗಳನ್ನು ಕರ್ನಾಟಕ ಸರ್ಕಾರ ಮಂಜೂರು ಮಾಡಿದೆ.

(ವಿವರ ಅನುಬಂಧ-1ರಲ್ಲಿ)

ಆ) ಅನುಬಂಧ 1ನ್ನು ನೋಡುವುದು.

ಇ) ಹೌದು

ಈ) ಸದರಿ ಯೋಜನೆಯಡಿಯಲ್ಲಿ ನಾಗನೂರು ಕೆರೆಯನ್ನು ಅಳವಡಿಸುವ ಕೆಲಸ ಪ್ರಗತಿಯಲ್ಲಿದೆ. ಈ ಕೆರೆಯ ದಂಡೆಯನ್ನು ಬಲಗೊಳಿಸುವ ಕೆಲಸವನ್ನು ಸಹ ಕರ್ನಾಟಕ ರಾಜ್ಯ ನಿರ್ಮಾಣ ನಿಗಮದ ಮೂಲಕ ತೆಗೆದುಕೊಳ್ಳಲಾಗಿದೆ. ಈ ಯೋಜನೆಯ ಇತರೆ ಘಟಕಗಳನ್ನು ಹಂತಗಳಲ್ಲಿ ತೆಗೆದುಕೊಳ್ಳಲಾಗುವುದು. ಶಿಗ್ಗಾಂನಲ್ಲಿನ ಜಲ ಶುದ್ಧೀಕರಣ ಘಟಕದ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆ ಮತ್ತು ಗುತ್ತಿಗೆದಾರರ ನೇಮಕದ ನಂತರ ಕೆಲಸವನ್ನು ಆರಂಭಿಸಲಾಗುವುದು. ಜನವರಿ 94ರ ಅಂತ್ಯದವರೆಗೆ ಈ ಯೋಜನೆಗೆ ಒಟ್ಟು ರೂ. 340.58 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಅನುಬಂಧ -1

ಕ್ರ.ಸಂ.	ಯೋಜನೆಯ ಹೆಸರು	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	ಖರ್ಚು ಮಾಡಿರುವ ಹಣ (ಲಕ್ಷ ರೂ.ಗಳಲ್ಲಿ)	ಪ್ರಸ್ತುತ ಹಂತ
1)	ಹಳಿಯಾಳ	382.63	0.74	ಎಸಿ ಕೊಳವೆ ಮಾರ್ಗ ಮತ್ತು ಜಾಕ್ವೆಲ್ಲಗಳಿಗೆ ಟೆಂಡರುಗಳನ್ನು ಕರೆಯಲಾಗಿದೆ.
2)	ಮಧುಗಿರಿ	108.00	-	ಯೋಜನೆಯನ್ನು ಇತ್ತೀಚಿಗೆ ಮಂಜೂರು ಮಾಡಲಾಗಿದೆ. ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿದೆ.
3)	ಚಿಂತಾಮಣಿ	49.75	20.30	ಜಲಸಂಗ್ರಹಗಾರ ಕೆರೆಯ ಕೆಲಸ ಪ್ರಗತಿಯಲ್ಲಿದೆ.
4)	ಮಳವಳ್ಳಿ	400.00	-	ಯೋಜನೆಯನ್ನು ಇತ್ತೀಚಿಗೆ ಮಂಜೂರು ಮಾಡಲಾಗಿದೆ. ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿದೆ.
5)	ಕಾರ್ಕಳ	220-00	2.57	ವೆಂಟೆಂಡ್ ಡ್ಯಾಮ ಮತ್ತು ಹೆಡ್ ವರ್ಕ್ಸ್ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ. ಇತರೆ ಕೆಲಸಗಳನ್ನು ಇನ್ನೂ ತೆಗೆದುಕೊಳ್ಳಬೇಕಾಗಿದೆ.
6)	ಅಣ್ಣಗೇರಿ ನವಲಗುಂದ	189.77	0.00	ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿದೆ.
7)	ಇಂಡಿ	328.51	0.38	ಹೆಡ್ ವರ್ಕ್ಸ್ ಮತ್ತು ಎತ್ತರಿಸಿದೆ ಜಲಸಂಗ್ರಹಾಗಾರಗಳಿಗೆ ಟೆಂಡರ್ ಕರೆಯಲಾಗಿದೆ. ಮತ್ತು ಕೆಲಸಗಳನ್ನು ತೆಗೆದುಕೊಳ್ಳಲಾಗುವುದು.
8)	ಶೋರಾಪುರ	500.00	0.00	ಈ ಯೋಜನೆಯು ಇತ್ತೀಚಿಗೆ ಮಂಜೂರಾಗಿದ್ದು, ಕಾಮಗಾರಿಯನ್ನು ತೆಗೆದುಕೊಳ್ಳಬೇಕಾಗಿದೆ.

ಶ್ರೀ ಮಂಜುನಾಥ ಸಿ. ಕುನ್ನೂರು : ಮಾನ್ಯ ಸಭಾಧ್ಯಕ್ಷರೇ, ಸಿದ್ದಾಪುರ ಮತ್ತು ಬಂಕಾಪುರ ಸಂಯುಕ್ತ ಕುಡಿಯುವ ನೀರಿನ ಯೋಜನೆಗೆ ಜಲ ಶುದ್ಧೀಕರಣ ಘಟಕವನ್ನು ಟೆಂಡರ್ ಕರೆಯಲಾಗಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ, ಅದಕ್ಕೆ ಹೌದು ಅಂತ ಉತ್ತರ ಕೊಟ್ಟಿದ್ದಾರೆ. ಜೊತೆಗೆ ಈ ಯೋಜನೆ ಯಾವ ಹಂತದಲ್ಲಿ ಎಂದಾಗ ನಾಗನೂರು ಕೆರೆ ಆಳ ತೆಗೆಯತಕ್ಕ ಕೆಲಸ ಪ್ರಗತಿಯಲ್ಲಿದೆ ಮತ್ತು ಈ ಕೆಲಸವನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮಕ್ಕೆ ವಹಿಸಿ ಕೊಡಲಾಗಿದೆ. ಹಾಗೂ ಈ ಯೋಜನೆಯ ಕೆಲಸವನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಈ ಜಲ ಶುದ್ಧೀಕರಣ ಘಟಕವನ್ನು ಕೂಡಲೇ ಅಲ್ಲಿ ಪ್ರಾರಂಭಿಸುವುದು ಅತಿ ಅವಶ್ಯಕತೆ ಇದೆ. ಈ ಜಲ ಶುದ್ಧೀಕರಣ ಘಟಕಕ್ಕೆ ಬೇಕಾಗಿರತಕ್ಕಂತಹ ಜಮೀನನ್ನು ಕೂಡ ಅಲ್ಲಿ ಭೂ ಮಾಲೀಕರಿಂದ ನಮ್ಮ ಕೆ.ಯು.ಡಬ್ಲ್ಯೂ ಇಲಾಖೆಯವರಿಗೆ ವಹಿಸಿಕೊಡಲಾಗಿದೆ. ಒಂದು ವೇಳೆ ಈ ಯೋಜನೆ ಹಂತ ಹಂತವಾಗಿ ತೆಗೆದುಕೊಳ್ಳುತ್ತಾ ನಾವು ನಿಧಾನ ಮಾಡುತ್ತಾ ಹೋದರೆ ಇದರ ಅಂದಾಜುವೆಚ್ಚ ಬಹಳ ಹೆಚ್ಚಾಗುತ್ತದೆ. ಆ ಕಾರಣದಿಂದ ಆದಷ್ಟು ಬೇಗನೆ ಮಾಡಿಕೊಡಬೇಕು ಅಂತ ಈ ವಿಚಾರವನ್ನು ಈ ಸಂದರ್ಭದಲ್ಲಿ ಕೇಳುತ್ತೇನೆ. ಮಾನ್ಯ ಅಧ್ಯಕ್ಷರೇ ಈ ಯೋಜನೆಯನ್ನು ತೆಗೆದುಕೊಂಡಾಗ ಶಿಗ್ಗಾವ್, ಕಲ್ಲೂರ್ ಮತ್ತು ಬಂಕಾಪುರಗಳ ಮಧ್ಯದಲ್ಲಿ ಬರತಕ್ಕಂತಹ ಕೆಲವು ಜಿಲ್ಲೆಗಳನ್ನು ಅವರು ಆಯ್ಕೆ ಮಾಡಿಕೊಂಡಿರುವುದಿಲ್ಲ ಅಲ್ಲಿ ಬರತಕ್ಕಂತಹ ಹಳ್ಳಿಗಳನ್ನು ಮತ್ತೆ ನೂತನ ಶಿಗ್ಗಾವಿಯಲ್ಲಿ ಕೆ.ಎಸ್.ಆರ್.ಪಿ. ಬಟಾಲಿಯನ್ ಕೂಡ ಆಗಿದೆ. ಹಾಗಾಗಿ ಈ ಜನಸಂಖ್ಯೆ ಪ್ರಮಾಣಕ್ಕೆ ಅನುಸಾರವಾಗಿ ನಾವು ಒಂದು ಕೆರೆಯ ಮತ್ತು ಯೋಜನೆಯ ಕೆಲಸವನ್ನು ಕೈಗೊಳ್ಳಬೇಕೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಚೌಡರೆಡ್ಡಿ : ಸನ್ಮಾನ್ಯ ಉಪಾಧ್ಯಕ್ಷರೇ, ಪರಿಶೀಲಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಶ್ರಯ ಅಂಬೇಡ್ಕರ್ ಮನೆಗಳು.

603 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಗೆ ಮಂಜೂರಾದ ಆಶ್ರಯ ಅಂಬೇಡ್ಕರ್ ಮನೆಗಳೆಷ್ಟು?

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿಗೆ ಮಂಜೂರಾಗಿರುವ ಆಶ್ರಯ ಅಂಬೇಡ್ಕರ್ ಮನೆಗಳೆಷ್ಟು?

ಇ) ಈ ಅಂಕಿ ಅಂಶವು ಸರ್ಕಾರಕ್ಕೆ ತೃಪ್ತಿಕರವಾಗಿದೆಯೇ?

ಶ್ರೀ ಗೋಪಿನಾಥ್ ಆರ್ ಸಾಂದ್ರ (ವಸತಿ ಸಚಿವರು) :

ಅ) ಆಶ್ರಯ ಮನೆಗಳು - 3000

ಡಾ:ಅಂಬೇಡ್ಕರ್ ಯೋಜನೆಯ ಮನೆಗಳು - 861

ಆ)

ವಿಧಾನಸಭಾ ಕ್ಷೇತ್ರದ ಹೆಸರು	ಆಶ್ರಯ ಮನೆಗಳು	ಡಾ: ಅಂಬೇಡ್ಕರ್ ಮನೆಗಳು
1) ಶೃಂಗೇರಿ	500	98
2) ಮೂಡಿಗೆರೆ	500	122
3) ಚಿಕ್ಕಮಗಳೂರು	500	198
4) ಬೀರೂರು	500	148